ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯವರ ಕಛೇರಿ,
ಬೆಂಗಳೂರು ದಕ್ಷಿಣ ವಲಯ,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು,
ಬನ್ನೇರುಘಟ್ಟ ಮುಖ್ಯ ರಸ್ತೆ,
ಬೆಂಗಳೂರು-560029.

Phone No-080-29761529
Email Id- rfosouthblr@gmail.com

No.78/Education/CC/RFO/Bng-South/2026 **Dated: 08-04-2026**

ಗೆ,

Authorized Signatory,
M/s. Ravindra Bharathi Educational Society,
No.23/812, Fethekhanpet,
Nellore, S P S R Nellore District,
Andrapradesh.

ಮಾನ್ಯರೇ,

ವಿಷಯ : **M/s. Ravindra Bharathi Educational Society,** ನಂ-3/7, ಅರಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 076. ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸಮಾಪನ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಸಲಹಾ ಪತ್ರ ಸಂ. 45/Education/FSR/RFO/Bng-South/2026 ದಿನಾಂಕ: 13-03-2026.
2) ನಿಮ್ಮ ಪತ್ರ ದಿನಾಂಕ: 04-04-2026.

<<<<<<<>>>>>>>

ನಂ-3/7, ಅರಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 076. ಇಲ್ಲಿ ನಿರ್ಮಿಸಿರುವ 19.30 ಮೀಟರ್ ಎತ್ತರದ ಕೆಳಹಂತ, ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ M/s. Ravindra Bharathi Educational Society, ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ಈ ಮೇಲಿನ ಉಲ್ಲೇಖ (1) ರಂತೆ ದಿನಾಂಕ:13-03-2026 ರಂದು ನಿಮ್ಮ ಕೋರಿಕೆಯಂತೆ ಅಗ್ನಿಶಮನ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2) ರ ನಿಮ್ಮ ಪತ್ರದಲ್ಲಿ, ಸದರಿ ಶೈಕ್ಷಣಿಕ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ ನೀಡುವಂತೆ ಕೋರಿರುವಿರಿ.

ನಿಮ್ಮ ಕೋರಿಕೆಯಂತೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಹುಳಿಮಾವು ಅಗ್ನಿಶಾಮಕ ಠಾಣೆ, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ರವರು ದಿನಾಂಕ: 06-04-2026 ರಂದು M/s. Ravindra Bharathi Educational Society ಇಲ್ಲಿ ನಿರ್ಮಿಸಿರುವ ಶೈಕ್ಷಣಿಕ ಕಟ್ಟಡವನ್ನು ಪರಿವೀಕ್ಷಣೆ ಮಾಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶೈಕ್ಷಣಿಕ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಬೆಂಗಳೂರು ದಕ್ಷಿಣ ವಲಯ ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸಮಾಪನ ಪತ್ರ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತು ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ ನಂ-3/7, ಅರಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 076. ಇಲ್ಲಿ ನಿರ್ಮಿಸಿರುವ 19.30 ಮೀಟರ್ ಎತ್ತರದ ಕೆಳಹಂತ, ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ M/s. Ravindra Bharathi Educational Society, ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂ.45/Education/FSR/RFO/Bng-South/2026 ದಿನಾಂಕ: 13-03-2026 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ನಿಮ್ಮ ಮುಚ್ಚಳಿಕೆ ಪತ್ರ ದಿನಾಂಕ 06-04-2026 ರಲ್ಲಿ ಒಪ್ಪಿರುವಂತೆ, ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಹಾಗೂ ಕಟ್ಟಡದಲ್ಲಿನ ಶೇಕಡಾ 40% ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಬೆಂಗಳೂರಿನ ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ಸೂಕ್ತ ತರಬೇತಿಯನ್ನು 03 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿನ ಮೇಲೆ **ಸಮಾಪನ ಪತ್ರವನ್ನು** ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನೀಡಲಾಗಿದೆ.

ಈ ಸಮಾಪನ ಪ್ರಮಾಣ ಪತ್ರವು ದಿನಾಂಕ:-12-03-2028 ರವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ ಅಥವಾ ಯಾವುದೇ ರೀತಿಯ ಖಾಯಂ/ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, **ಈ ಸಮಾಪನ ಪತ್ರವು** ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ 4/26
ಬೆಂಗಳೂರು ದಕ್ಷಿಣ ವಲಯ
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

1) **ಪ್ರತಿಯನ್ನು ಗೌರವಗಳೊಂದಿಗೆ,**
ಮಾನ್ಯ ಪೋಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
2) **ಜಿಲ್ಲಾ ಅಗ್ನಿಶಾಮಕ ಅಧಿಕಾರಿ,**
ಹುಳಿಮಾವು ಅಗ್ನಿಶಾಮಕ ಠಾಣೆ
ಬೆಂಗಳೂರು.

Office of the Regional Fire Officer
Bangalore South Zone
Karnataka State Fire and Emergency Services
Bannerghatta Main Road,
Bangalore - 560029.

Phone No-080-29761529
Email ID: rfosouthblr@gmail.com

No.78/Education/CC/RFO/Bng-South/2026

Dated: 08-04-2026

To,
Authorized Signatory
M/S. Ravindrabharathi Educational Society
No.23/812, Fethekhanpet,
Nellore, S P S R Nellore District,
Andharapradesh.

Dear,

Sub: Regarding issuance of Fire Compliance Certificate to M/S. Ravindrabharathi Educational Society, No.3/7, Arekere Main Road, Bannerghatta Road, Bangalore - 560076.

Ref: 1) Advisory letter No.45/Education/FSR/RFO/Bng-South/2026 dated 13-03-2026.
2) Your letter dated 04-04-2026

As per the request letter of M/S. Ravindrabharathi Educational Society, No.3/7, Arekere Main Road, Bannerghatta Road, Bangalore - 560076 dated 13-03-2026, the Educational building with a height of 19.30 meters consisting of basement, ground floor and 4 upper floors has been issued a fire advisory letter by the Fire and Emergency Services Department as per reference (1) above.

In your letter referred (2) above, you have requested the Fire and Emergency Services Department to issue a completing certificate stating that the installation of fire fighting equipment in the said educational building has been completed.

As per your request, the District Fire Officer, Hulimavu Fire Station, Karnataka Fire and Emergency Services inspected the educational building constructed by M/S. Ravindrabharathi Educational Society on 06-04-2026 and found that as per the advisory letter issued by the Fire and Emergency Services Department, fire protection and control, installation of fire extinguishing equipment and safety measures have been fully implemented in the educational building and it has been stated that only the fire safety training for the employees / staff of the said building remains pending, and that arrangements for such training can be made for the staff only after obtaining the completion certificate for the building.

Therefore M/S. Ravindrabharathi Educational Society, having basement, ground floor and 4 upper floors of 19.30 meters height, constructed here, is hereby directed to strictly follow the Fire and Emergency Services Department's advisory, letter No.45/Education/FSR/RFO/Bng-South/2026 dated 13-03-2026 fire protection and control and installation of fire extinguishing equipment and protective measures to keep the fire extinguishing equipment in good condition and to provide fire protection and control measures and as agreed in your letter of intent dated 06-04-2026, this compliance certificate

NOTARY
G. CHANDRAKALA
Regd. No.: 1259
Term Expiry Date: 23.01.2032
GOVT. OF INDIA

has been issued by the Fire and Emergency Services Department on the condition that arrangements to be made for 40% of the staff / employees in the building to undergo appropriate training from R.A. Mundkur Fire and Emergency Services Academy , Bangalore

This compliance letter is valid till date 12-03-2028. Thereafter, this compliance certificate is required to be renewed.

It is also advised that if any time the fire protection and fire extinguishing equipment installed as per the department's recommendations is found to be in poor condition or the safety measures are not strictly followed or any additional structures are constructed in the open area left by law around the said building or any kind of permanent / temporary obstruction is caused, this compliance certificate will be void and action will be taken within the framework of the law.

Sd/-
Regional Fire Officer
Bangalore South Zone
Bannerghatta Road, Bangalore - 29.

1) Copy with respect to
   Honorable Director General of Police and Director
   Karnataka Fire and Emergency Services
2) District Fire Officer
   Hulimavu Fire Station,
   Bangalore

ATTESTED BY ME

CHANDRAKALA, M.A., LL.B.,
ADVOCATE & NOTARY PUBLIC
GOVT OF INDIA
293, 6th Cross, Indiranagar, Rajajinagar,
WOC Road, BENGALURU-560 010

NOTARY
CHANDRAKALA
Throughout Bangalore Metropolitan Area
Regd. No. 1259
Term Expiry Date
23.01.2032
GOVT. OF INDIA

TRANSLATION